ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. ಆದಾಗ್ಯೂ ಸಹಿತ, ಮೇಲಿನ ಸೌಲಭ್ಯಗಳನ್ನು ಅರೆ ಮಿಲಿಟರಿ ಪಡೆಗಳಿಗೆ ವಿಸ್ತರಿಸುವ ಸಲುವಾಗಿ ಸೈನಿಕ ಕಲ್ಯಾಣ ಇಲಾಖೆಯಿಂದ ವಿವರವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

8. ವಿಷಯ: ಮುಧೋಳ್ ಪಟ್ಟಣಕ್ಕೆ ವರ್ತುಲ ರಸ್ತೆ ನಿರ್ಮಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):– ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದ ಮುಧೋಳ ಪಟ್ಟಣದಲ್ಲಿ ವಾಹನಗಳ ಸಂಖ್ಯೆಯು ಹೆಚ್ಚಾಗಿ ಪ್ರತಿನಿತ್ಯ accident ಗಳು ಆಗುತ್ತಿವೆ. Traffic jam ಆಗುತ್ತಿದೆ. ನನ್ನ ಮತ ಕ್ಷೇತ್ರದಲ್ಲಿ 7 ಸಕ್ಕರೆ ಕಾರ್ಖಾನೆಗಳು 4 ಸಿಮೆಂಟ್ ಕಾರ್ಖಾನೆಗಳು ಇರುವುದರಿಂದ Tractor-Trailer ಗಳು, truck ಗಳು, Bullock cart ಗಳು ಮೊಲಾಸಿಸ್ ಸಾಗಾಣಿಕೆ ಮಾಡತಕ್ಕಂತಹ Tractor ಗಳು, Tanker ಗಳು ಹೆಚ್ಚಾಗಿ ಓಡಾಡುವುದರಿಂದ ಕಳೆದ 5 ವರ್ಷಗಳಲ್ಲಿ ಸುಮಾರು 900 accidents ಗಳು ಆಗಿವೆ. ಇದರಿಂದಾಗಿ ಸುಮಾರು 400 ಜನರು ಸತ್ತುಹೋಗಿದ್ದಾರೆ. ಅದಕ್ಕಾಗಿ ಮುಧೋಳ ಪಟ್ಟಣಕ್ಕೆ ಒಂದು ವರ್ತುಲ ರಸ್ತೆಯು ಅಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ವರ್ತುಲ ರಸ್ತೆಗೆ ಸಂಬಂಧಿಸಿದಂತೆ sanction ಆಗಿದೆ. ಈ ಬಗ್ಗೆ ಏಕೆ ವಿಳಂಬ ಮಾಡುತ್ತಿದ್ದಾರೆ, ಎನ್ನುವುದರ ಬಗ್ಗೆ ಸರ್ಕಾರವು ನಿರ್ದಿಷ್ಟವಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ತ್ವರಿತವಾದಂತಹ ಕ್ರಮವನ್ನು ವಹಿಸುವುದಕ್ಕೋಸ್ಕರ ಈ ಬಗ್ಗೆ ಸೂಚನೆಯನ್ನು ಕೊಡಿಸುತ್ತೇವೆ. ಸಂಬಂಧಪಟ್ಟಂತಹ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು:– ಆಯಿತು.